ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು) : ಮಳೆಯಿಂದ ಕೆಟ್ಟು ಹೋಗಿರುವ ರಸ್ತೆಗಳನ್ನು ಸರಿಪಡಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

10. ವಿಷಯ: ಮರಗಳ ಕಳ್ಳ ಸಾಗಾಣಿಕೆ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾದ ವಾಹನಗಳನ್ನು ಸೀಜ್ ಮಾಡುವ ಕುರಿತು

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಗಂಧದ ಮರಗಳ ಕಳ್ಳ ಸಾಗಾಣಿಕೆಯಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಎಲ್ಲಾ ರೀತಿಯ ಮರಗಳ ಕಳ್ಳ ಸಾಗಾಣಿಕೆ ಕೂಡ ನಮ್ಮ ಮಲೆನಾಡು ಕ್ಷೇತ್ರದಲ್ಲಿ ನಡೆಯುತ್ತಿದೆ. ಗಂಧದ ಮರಗಳ ಕಳ್ಳ ಸಾಗಾಣಿಕೆ ಜೊತೆಗೆ ವಶಪಡಿಸಿಕೊಂಡಿರುವ ವಾಹನಗಳನ್ನು ಮೂರು ತಿಂಗಳೊಳಗೆ ಆದೇಶ ಹೊರಡಿಸುವ ಮೂಲಕ ಅವುಗಳನ್ನು ಹರಾಜು ಹಾಕುವ ವ್ಯವಸ್ಥೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಈಗ ಏನಾಗಿದೆಯೆಂದರೆ, ಈ ರೀತಿ ವಶಪಡಿಸಿಕೊಂಡಿರುವ ವಾಹನಗಳನ್ನು ಅಧಿಕಾರಿಗಳು ಉಪಯೋಗಿಸಿಕೊಳ್ಳಲು ಆರಂಭಿಸಿದ್ದಾರೆ. ಇಷ್ಟೇ ಅಲ್ಲದೆ, ವಾಹನಗಳ ಎಲ್ಲಾ ಬಿಡಿ ಭಾಗಗಳನ್ನೂ ಕದ್ದು ಮಾರಾಟ ಮಾಡುತ್ತಿದ್ದಾರೆ. ವಶಪಡಿಸಿಕೊಂಡ ವಾಹನಗಳನ್ನು ಮೂರು ತಿಂಗಳೊಳಗಾಗಿ ಸಂಬಂಧಪಟ್ಟವರು ವಾಪಸ್ಸು ತೆಗೆದುಕೊಂಡು ಹೋಗದಿದ್ದರೆ ವಾಹನಗಳನ್ನು ಸೀಜ್ ಮಾಡಿಸುವ ವ್ಯವಸ್ಥೆ ಮಾಡಿಸಬೇಕು. ಜೊತೆಗೆ ಅಂತಹ ವಾಹನಗಳನ್ನು ಅಧಿಕಾರಿಗಳು ಉಪಯೋಗಿಸದಿರುವ ರೀತಿಯಲ್ಲಿ ಆದೇಶಿಸ ಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು) : ಆಯಿತು, ಸರ್ಕಾರ ನೋಡುತ್ತದೆ.

11. ವಿಷಯ: ನಕಲಿ ಶಿಕ್ಷಕರುಗಳನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳುವ ಕುರಿತು

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ನಕಲಿ ಶಿಕ್ಷಕರ ಹಾವಳಿ ವ್ಯಾಪಕವಾಗಿದೆ ಮತ್ತು ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ನಕಲಿ ಶಿಕ್ಷಕರು ನಕಲಿ ಅಂಕಪಟ್ಟಿಗಳನ್ನು ಕೊಟ್ಟು ಸೇರಿದ್ದಾರೆ ಎನ್ನುವುದು ಪತ್ರಿಕಾ ವರದಿಯಲ್ಲಿ ಓದಿ ದಿಗ್ಭ್ರಮೆಯಾಯಿತು. ಈ ರೀತಿ ನಕಲಿ ಅಂಕಪಟ್ಟಿಗಳನ್ನು ನೀಡಿ ಸೇರಿರುವ ಎಷ್ಟು ನಕಲಿ ಶಿಕ್ಷಕರುಗಳನ್ನು ಪತ್ತೆಹಚ್ಚಲಾಗಿದೆ? ಸರ್ಕಾರ ಈ ಬಗ್ಗೆ ಯಾವ ರೀತಿಯ ಕ್ರಮ ಕೈಗೊಂಡಿದೆ? ಇದು ಕೇವಲ ಕೆಳಹಂತದ ಅಧಿಕಾರಿಗಳಿಂದ ಆಗಿರುವ ಕೃತ್ಯವಲ್ಲ. ಬಹಳ ದೊಡ್ಡ ಮಟ್ಟದಲ್ಲೇ ನಕಲಿ ಶಿಕ್ಷಕರುಗಳು ಸೇರ್ಪಡೆಯಾಗಿರುವ ಸಾಧ್ಯತೆಯಿದೆ. ಇದರ ಬಗ್ಗೆ ತನಿಖೆ ನಡೆಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸದಸ್ಯರು ನನ್ನ ಕೊಠಡಿಗೆ ಬಂದು ಆ ಬಗ್ಗೆ ಚರ್ಚೆ ಮಾಡಿದರೆ ಏನಾದರೂ ಪರಿಹಾರ ಕಂಡು ಹಿಡಿಯಬಹುದು.